ಅ) ಪ್ರತಿಯೊಂದು ಜಲಾನಯನ (ಕೆರೆಯ) ನೀರಾವರಿಯಾಗುವ ಭೂ ಪ್ರದೇಶದ ವಿವರ ಹಾಗೂ ಖರ್ಚು ಮಾಡುವ ಅಂದಾಜು ಹಣದ ವಿವರ ತಿಳಿಸುವುದು, ಇದರಿಂದ ಪ್ರಯೋಜನ ಪಡೆಯುವ ರೈತ ಕುಟುಂಬಗಳ ವಿವರ ನೀಡುವುದು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಮತ್ತು ಸಣ್ಣ ನೀರಾವರಿ ಸಚಿವರು):

ಅ) ಸರ್ಕಾರವು ಜಲಸಂವರ್ಧನೆ ಯೋಜನೆಯಡಿಯಲ್ಲಿ ಆರು ಕೃಷಿ ಭೌಗೋಳಿಕ ವಲಯಗಳ ಆಧಾರದ ಮೇಲೆ ಆಯ್ಕೆ ಮಾಡಿರುವ 9 ಜಿಲ್ಲೆಗಳಲ್ಲಿ ಧಾರವಾಡ ಜಿಲ್ಲೆಯು ಸೇರ್ಪಡೆಯಾಗಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಬಸವನಬಾಗೇವಾಡಿಯಲ್ಲಿ ಬಸ್ ಘಟಕ ಪ್ರಾರಂಭಿಸುವುದು

302(736) - ಶ್ರೀ ಬೆಳ್ಳುಬ್ಬಿ ಸಂಗಪ್ಪ ಕಲ್ಲಪ್ಪ (ಬಸವನಬಾಗೇವಾಡಿ): ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಿಜಾಪುರ ಜಿಲ್ಲೆಯಲ್ಲಿ ಹಾಲಿ ಎಷ್ಟು ಬಸ್ ಘಟಕಗಳು ಅಸ್ತಿತ್ವದಲ್ಲಿವೆ. ಎಲ್ಲೆಲ್ಲಿವೆ ವಿವರ ನೀಡುವುದು;

ಆ) ಇವುಗಳ ಜೊತೆಯಲ್ಲಿ ನೂತನವಾಗಿ ಬಸ್ ಘಟಕಗಳನ್ನು ಸ್ಥಾಪಿಸುವ ವಿಚಾರ ಸರ್ಕಾರಕ್ಕಿದೆಯೇ;

ಇ) ಇದ್ದಲ್ಲಿ, ಎಲ್ಲೆಲ್ಲಿ, ಯಾವಾಗ ಪ್ರಾರಂಭಿಸಲಾಗುವುದು;

ಈ) ಬಸವನ ಬಾಗೇವಾಡಿ ಬಸ್ ಘಟಕವು ಯಾವಾಗ ಮಂಜೂರು ಮಾಡಲಾಯಿತು. ಇದರ ಕಾಮಗಾರಿಯನ್ನು ಯಾವಾಗ ಕೈಗೆತ್ತಿಕೊಳ್ಳಲಾಗುತ್ತದೆ., ಯಾವಾಗ ಪೂರ್ಣಗೊಳಿಸಲಾಗುವುದು.

ಉ) ಕಾಮಗಾರಿ ಅನುಷ್ಠಾನಕ್ಕಿರುವ ಅಡೆತಡೆಗಳೇನು; ಎಷ್ಟು ಹಣ ಮಂಜೂರಾಗಿದೆ?

ಶ್ರೀ ಬಿ. ರಾಮನಾಥ್ ರೈ (ಸಾರಿಗೆ ಸಚಿವರು):

ಅ) ವಿಜಾಪುರ ಜಿಲ್ಲೆಯಲ್ಲಿ ಪ್ರಸ್ತುತ 5 ಘಟಕಗಳು ಅಸ್ತಿತ್ವದಲ್ಲಿವೆ. ಅವುಗಳು ಅನುಕ್ರಮವಾಗಿ ವಿಜಾಪುರ ಘಟಕ-1 ಮತ್ತು 2, ಇಂಡಿ, ಸಿಂದಿಗಿ ಮುದೆಬಿಹಾಳ ಪಟ್ಟಣದಲ್ಲಿವೆ.

ಆ) ಇದೆ.

ಇ) ವಿಜಾಪುರ ಜಿಲ್ಲೆಯ ತಾಳೀಕೋಟೆಯಲ್ಲಿ ನೂತನವಾಗಿ ಬಸ್ ಘಟಕ ನಿರ್ಮಿಸಲಾಗಿದ್ದು, ಕಾಮಗಾರಿ ಪೂರ್ಣಗೊಳ್ಳುವ ಹಂತದಲ್ಲಿರುತ್ತದೆ. ಇದರೊಂದಿಗೆ ಬಸವನ ಬಾಗೇವಾಡಿಯಲ್ಲಿ ಬಸ್ ಘಟಕ ನಿರ್ಮಿಸುವ ಕುರಿತಂತೆ ಪ್ರಸ್ತಾವನೆ ಇರುತ್ತದೆ.

ಈ) ಜಮೀನು ಪಡೆದುಕೊಳ್ಳುವ ವಿಷಯದಲ್ಲಿ ಭೂಸ್ವಾಧೀನ ಪ್ರಕ್ರಿಯೆ ದಿನಾಂಕ:18-6-2002 ರಂದು ಪೂರ್ಣಗೊಂಡಿದ್ದು, ಭೂ ಸ್ವಾಧೀನತೆಯಲ್ಲಿರುವ ಜಮೀನಿನ ಕಬ್ಜಾವನ್ನು ಸಂಸ್ಥೆಗೆ ವಹಿಸಿಕೊಟ್ಟ ನಂತರ, ಬಸ್ ಘಟಕದ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗುವುದು.

ಉ) ಘಟಕಕ್ಕೆ ಗೊತ್ತುಪಡಿಸಿದ ಜಮೀನನ್ನು ಸಂಸ್ಥೆಯ ವಶಕ್ಕೆ ಪಡೆದುಕೊಂಡ ನಂತರ ನಿರ್ಮಾಣ ಕಾಮಗಾರಿ ಕೈಗೆತ್ತಿಕೊಳ್ಳಲಾಗುವುದು. ಈ ಕುರಿತು ಈಗಾಗಲೇ 60.00 ಲಕ್ಷ ರೂಪಾಯಿಗಳನ್ನು 2002-03 ನೇ ಬಜೆಟ್‌ನಲ್ಲಿ ಅಳವಡಿಸಲಾಗಿದೆ.

ಆಲಮಟ್ಟಿ ಜಲ ವಿದ್ಯುತ್ ಯೋಜನೆ

303(737) - ಶ್ರೀ ಬೆಳ್ಳುಬ್ಬಿ ಸಂಗಪ್ಪ ಕಲ್ಲಪ್ಪ (ಬಸವನಬಾಗೇವಾಡಿ): ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಆಲಮಟ್ಟಿ ಜಲ ವಿದ್ಯುತ್ ಯೋಜನೆಯನ್ನು ಸರ್ಕಾರ ಯಾವಾಗ ಕಾರ್ಯಾರಂಭಗೊಳಿಸಿತು?

ಆ) ಈ ಯೋಜನೆಯನ್ನು ಯಾವಾಗ ಪೂರ್ಣಗೊಳಿಸಲಾಗುವುದು?

ಇ) ಇದಕ್ಕಾಗಿ ಇದುವರೆಗೆ ಖರ್ಚು ಮಾಡಿರುವ ಮೊತ್ತವೆಷ್ಟು? ಯೋಜನೆಯ ಅಂದಾಜು ಮೊತ್ತವೆಷ್ಟು?

ಈ) ಇದರಿಂದ ಉತ್ಪಾದನೆ ಮಾಡಲು ಉದ್ದೇಶಿಸಿರುವ ವಿದ್ಯುತ್ ಸಾಮರ್ಥ್ಯ ಎಷ್ಟು?

ಉ) ವಿದ್ಯುತ್ ಉತ್ಪಾದನೆಗಾಗಿ ಖರ್ಚಾಗುವ ಹಣವೆಷ್ಟು? ವಿವರ ನೀಡುವುದು.

ಶ್ರೀ ಬಸವರಾಜ್ ಪಾಟೀಲ್ (ಇಂಧನ ರಾಜ್ಯ ಸಚಿವರು):

ಅ) ಆಲಮಟ್ಟಿ ಜಲ ವಿದ್ಯುತ್‌ಯೋಜನೆಯನ್ನು ಸರ್ಕಾರವು ದಿನಾಂಕ: 15-3-2002 ರಂದು ಕಾರ್ಯಾರಂಭಗೊಳಿಸಿತು.

ಆ) ಈ ಯೋಜನೆಯ 15 ಮೆಗಾ ವ್ಯಾಟ್ ಸಾಮರ್ಥ್ಯದ ಮೊದಲನೆ ಘಟಕವನ್ನು ಮಾರ್ಚ್ 2004 ರ ಹೊತ್ತಿಗೆ ಪೂರ್ಣಗೊಳಿಸುವ ಕಾರ್ಯಕ್ರಮವಿದೆ. ಉಳಿದ 5 ಘಟಕಗಳನ್ನು, ಕೆಲಸಗಳು ಪ್ರಾರಂಭಗೊಂಡ ದಿನದಿಂದ 37 ತಿಂಗಳೊಳಗೆ ಹಂತ ಹಂತವಾಗಿ ಕಾರ್ಯಾರಂಭಗೊಳಿಸುವ ಕಾರ್ಯಕ್ರಮವಿದೆ.

ಇ) ಈ ಯೋಜನೆಗೆ ಜೂನ್ ಅಂತ್ಯದವರೆಗೆ 70.40 ಕೋಟಿ ರೂಪಾಯಿಗಳನ್ನು ಖರ್ಚು ಮಾಡಲಾಗಿದೆ. ಈ ಯೋಜನೆಯ ಅಂದಾಜು ವೆಚ್ಚವು 674.38 ಕೋಟಿ ರೂಪಾಯಿಗಳಾಗಿರುತ್ತದೆ.

ಈ) ಈ ಯೋಜನೆಯ ಸ್ಥಾಪಿತ ಸಾಮರ್ಥ್ಯವು 290 ಮೆಗಾ ವ್ಯಾಟ್ ಆಗಿರುತ್ತದೆ. 15 ಮೆಗಾವ್ಯಾಟ್‌ನ ಒಂದು ಘಟಕ ಮತ್ತು 55 ಮೆಗಾ ವ್ಯಾಟ್‌ನ ಐದು ಘಟಕಗಳನ್ನು ಸ್ಥಾಪಿಸಲಾಗುವುದು.

ಉ) ಯೋಜನೆಯ ಅಂದಾಜು ವೆಚ್ಚ ರೂ. 674.38 ಕೋಟಿ ರೂಪಾಯಿಗಳು.

ಹಾರ್ಡ್ ಕಾಸ್ಟ್	-	568.26 ಕೋಟಿ ರೂ.
ಸಾಫ್ಟ್ ಕಾಸ್ಟ್	-	106.12 ಕೋಟಿ ರೂ.
ಒಟ್ಟು ವೆಚ್ಚ	-	674.38 ಕೋಟಿ ರೂ.